ಮಾತೇ ಬೇರೆ, ನಿಮ್ಮದು ಬೇರೆ, ನಿಮ್ಮ ಕನಸು ಬೇರೆ, ನಿಮ್ಮ ಬದುಕು ಬೇರೆ, ನಿಮ್ಮ ಮಾತು ಬೇರೆ. ಹಾಗೆ ನೋಡಿದರೆ ಯಾರ ನಡುವೆಯೂ ಸಂವಹನ ಇಲ್ಲವೇ ಇಲ್ಲ. ಒಂದು ಸ್ನೇಹ ಇದ್ದರೆ ಮಾತ್ರ ಸಂವಹನ ಇರುತ್ತದೆ. ಇಲ್ಲ ಅಂದರೆ ನೀವು ಆಡಿದ ಮಾತು ಗೊತ್ತಾಗೋ ಸಾಧ್ಯತೆಯೇ ಇಲ್ಲ. ಅಂದರೆ, ಆ ಪರಿಧಿಯ ಅಸಂಖ್ಯಾತ ಬಿಂದುಗಳು ಅನನ್ಯವಾಗಿರುತ್ತವೆ. ನಾನು ಪದ್ಯ ಬರೆಯೋಕೆ ಶುರು ಮಾಡಿದಾಗ, 'ಹಕ್ಕಿ ಪಲ್ಟಿ' ಬರೆಯುವಾಗ ನನಗೆ ಆ ತರಹ ಒಂದು ಅನನ್ಯವಾದ ಸಂವೇದನೆ, ನನ್ನದೇ ಆದ ವ್ಯಕ್ತಿತ್ವವಿದೆ ಮತ್ತು ಈ ಲೋಕ ನನಗೆ ಕಾಣಿಸುವ ಹಾಗೆ ಇನ್ನ್ಯಾರಿಗೂ ಕಾಣುವುದಿಲ್ಲ ಎನ್ನುವ ತರಹದ ನಂಬಿಕೆ ಇತ್ತು. ಆದರೆ, ನಾನು ಯಾವಾಗ ಕುಮಾರವ್ಯಾಸನನ್ನು ಮತ್ತು ಅಲ್ಲಮನನ್ನು ಓದಿದೆನೋ ಹಾಗಲ್ಲ ಅಂತ ಅನಿಸಿತು. ಈ ಬದುಕು ಅನ್ನೋದು ಇದ್ದಹಾಗೆಯೇ ನನಗೆ ಆಗುವಂತಹದು. ನಿಮಗೆ ಆಗದೆ ಇರುವಂತಹದು ಯಾವುದೂ ಇಲ್ಲ. ಇಡೀ ಬದುಕೇ ಹಾಗೇ ಹಂಚಿಕೊಂಡಂತಹ ಒಂದು ವಿದ್ಯಮಾನ ಅದು. ನನ್ನದೇ ಆದಂತಹದು ಏನೂ ಇಲ್ಲ. ಅಂದರೆ, ಪರಿಧಿಯಿಂದ ನೀವು ಕೇಂದ್ರದ ಕಡೆಗೆ ಬರುತ್ತ ಬರುತ್ತ ಹೆಚ್ಚು ಹೆಚ್ಚು ಇಡೀ ಸಮಷ್ಟಿಗೆ ಸೇರುತ್ತಾ ಹೋಗುತ್ತೀರಿ. ಕೇಂದ್ರದಲ್ಲೇ ನಿಂತು ನೋಡಿದರೆ ಒಬ್ಬ ಮನುಷ್ಯನಿರುತ್ತಾನವನು, ವ್ಯಾಸನ ತರಹದವನು. ಆ ಮಾತು ಎಲ್ಲಾ ಜೀವಕೋಟಿಯದು, ಹುಳುಹುಪ್ಪಟೆಯದು, ಅಷ್ಟೇ ಅಲ್ಲ ನಿರ್ಜೀವದ್ದು, ಎಲೆಯದು, ತರಗೆಲೆಯದು, ಮಣ್ಣಿನದು...

▶ **ಕವಿಗೆ ವಿಗ್ರಹ ಭಂಜಕನ ಗುಣ ಇರುವುದು ತುಂಬಾ ಒಳ್ಳೆಯದು ಅನಿಸುತ್ತದೆ. ಆದರೆ, ಕವಿಗೆ ಆ ತರಹ ಏನಾದರೂ ಬಂದುಬಿಟ್ಟರೆ ಸ್ವಲ್ಪ ಅಪಾಯವೂ ಇದೆ. ಅಂದರೆ, ಎಲ್ಲಿ ಕಲೆ ಇದೆಯೋ, ಎಲ್ಲಿ ವಿಗ್ರಹ ಇದೆಯೋ, ಎಲ್ಲಿ ಸೂಕ್ಷ್ಮತೆ ಇದೆಯೋ ಅದು ಕೂಡ ಲಕ್ಸುರಿ, ಅದನ್ನು ಹೊಡೆದುಹಾಕಿ ಬಿಡೋಣ ಎಂಬ ಮನಃಸ್ಥಿತಿನೂ ಬರುತ್ತದೆ ಅಂತ ನಿಮಗೆ ಅನಿಸುವುದಿಲ್ಲವೇ?**

ಹೊಡೆದುಹಾಕೋ ಮನಃಸ್ಥಿತಿ ಅಲ್ಲ. ಮನಸಲ್ಲಿ ಒಡೆದು ಹಾಕಿಕೊಳ್ಳುವ ಸ್ಥಿತಿ ಅಷ್ಟೆ ಅದು. ಕನ್ನಡದ ಶ್ರೇಷ್ಠ ಹೇಳಿಕೆ ಯಾವುದು ಗೊತ್ತಾ? 'ಆಲಯಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎನ್ನುವುದು. ಆಲಯ ಕಟ್ಟಿರುವಂತಹದ್ದು, ಒಡೆದು ಹೋಗುತ್ತದೆ, ನಾಶ ಆಗುತ್ತದೆ. ಜಂಗಮವಾದ್ದು ಒಳಸತ್ಯವಾದದ್ದು, ನಾಶವಾಗೋದಿಲ್ಲ ಅನ್ನೋದು. ನಾನು ಮೊದಲು ಹೇಗೆ ಅರ್ಥ ಮಾಡಿಕೊಂಡಿದ್ದೆ ಅಂದರೆ, ಹೀಗೆ ಆಲಯ ಮತ್ತು ಜಂಗಮ ಒಂದಕ್ಕೊಂದು ವಿರುದ್ಧ, ಆಲಯ ಎನ್ನುವುದು ಹೋಗಬೇಕು, ಜಂಗಮ ಎನ್ನುವುದು ಉಳಿಯಬೇಕು ಅಂತ. ಆಮೇಲೆ ನನಗೆ ಗೊತ್ತಾಯ್ತು, ಆಲಯದೊಳಗೆ ಇರುವುದು ಜಂಗಮವೆ ಅಂತ. ಆಲಯವನ್ನು ಹೊಡೆದುಹಾಕು ಎಂದು ಹೇಳ್ತಾ ಇಲ್ಲ ಅವರು. ಆಲಯದೊಳಗಿರೋದು ಜಂಗಮವೆ ಅಂತ ತಿಳಿದುಕೋ ಎನ್ನುತ್ತಿದ್ದಾರೆ. ಹಾಗಾಗಿ ಯಾವ ರೂಪಗಳನ್ನು, ಯಾವ ಮೂರ್ತಿಗಳನ್ನು, ಯಾವ ಆಲಯಗಳನ್ನು ಒಡೆಯೋ ಅಗತ್ಯ ಇಲ್ಲ. ಅದನ್ನು ತಿಳಿದುಕೊಳ್ಳಬೇಕಾದ ಅಗತ್ಯ ಇದೆ. ಏನೆಂದರೆ ಇದರ ಒಳಗಡೆ ಇರೋದು ಬರೀ ಬೆಳಕು.

▶ **ಮಂಜುನಾಥ್, ನೀವು ಹೇಳಿದ್ರಿ, ಕವಿತೆಗಳ ಪುಸ್ತಕ ಮರುಮುದ್ರಣಗೊಳ್ಳೋದು ಕನ್ನಡದಲ್ಲಿ ತುಂಬಾ ಕಡಿಮೆ. ಉಳಿದಿದ್ದೆಲ್ಲ ಮರುಮುದ್ರಣಗೊಳ್ಳುತ್ತ ಇರುತ್ತವೆ ಅಂತ. ಅಪವಾದ ಎನ್ನುವ ಹಾಗೆ ಒಬ್ಬರು ಕವಿಗಳ ಪುಸ್ತಕ ಮರುಮುದ್ರಣಗೊಂಡಿತು. ಏಕೆ ಅಂತ ಕೇಳಿದಾಗ**